ಹೋರದೇಶಗಳಿಗೆ ಸಾಗಾಟವಾಗುವ ಕಲ್ಲು ಗಣಿಗಾರಿಕೆ

4108(4810); ಡಾ॥ ಮಾಲಕರೆಡ್ಡಿ ಎ.ಬಿ. (ಯಾದಗಿರಿ)

ಅ) 2011–12 ರಿಂದ 2013–14ನೇ ಸಾಲಿನಲ್ಲಿ ರಾಜ್ಯದ ವಿವಿಧ ಬಂದರುಗಳ ಮೂಲಕ ಹೊರ ದೇಶಗಳಿಗೆ ರಫ್ತು ಮಾಡಲಾದ ಕಲ್ಲು ಗಣಿಗಾರಿಕೆಯ ಗ್ರಾನೈಟ್ ಶಿಲೆಗಳ, ದಿಮ್ಮೆಗಳ ಪ್ರಮಾಣ (ಕ್ಯೂಬಿಕ್ ಮೀ.ಗಳಲ್ಲಿ) ಎಷ್ಟು; (ವರ್ಷವಾರು ವಿವರ ನೀಡುವುದು)

ಆ) ವಿವಿಧ ಬಂದರುಗಳ ಮೂಲಕ ಹೊರ ದೇಶಗಳಿಗೆ ಕಲ್ಲು ಗಣಿಗಾರಿಕೆಯ ಕಂಪನಿಗಳು ಸರ್ಕಾರಕ್ಕೆ ಸಂದಾಯ ಮಾಡಿದ ವಿವಿಧ (ಕಸ್ಟಮ್ಸ್ ಸೇರಿ ವಿವಿಧ ಶುಲ್ಕ) ಶುಲ್ಕಗಳ ಮೊತ್ತವೆಷ್ಟು; ವರ್ಷವಾರು ವಿವರ ನೀಡುವುದು;

ಇ) 2011–12 ರಿಂದ 2013–14ನೇ ಸಾಲುಗಳಲ್ಲಿ ಕಲ್ಲು ಗಣಿಗಾರಿಕೆಯ ಕಲ್ಲು ದಿಮ್ಮೆಗಳು, ಗ್ರಾನೈಟ್ ಶಿಲೆಗಳು ಪರ್ಮಿಟ್‌ಗಳಿಲ್ಲದೇ ಮತ್ತು ಪರ್ಮಿಟ್‌ನಲ್ಲಿ ನಮೂದಿತ ಪ್ರಮಾಣಕ್ಕಿಂತ ಅಧಿಕವಾಗಿದ್ದರೆ ಅಂಥ ಪ್ರಕರಣಗಳಲ್ಲಿ ಬಂದರು ಇಲಾಖೆ ಅಧಿಕಾರಿಗಳು ಕೈಗೊಂಡ ಕ್ರಮವೇನು; ಸಮಗ್ರವಾದ ವಿವರಗಳನ್ನು ನೀಡುವುದು?

ಶ್ರೀ ಬಾಬುರಾವ್ ಚಿಂಚನಸೂರ (ಮಾನ್ಯ ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) 2010–12 ರಿಂದ 2013–14ನೇ ಸಾಲಿನಲ್ಲಿ ಕಾರವಾರ ಬಂದರಿನ ಮೂಲಕ ಹೊರ ದೇಶಗಳಿಗೆ ರಫ್ತು ಮಾಡಲಾದ ಗ್ರಾನೈಟ್ ದಿಮ್ಮೆಗಳ ವರ್ಷವಾರು ವಿವರ ಈ ಕೆಳಕಂಡಂತಿದೆ.

2011–12	2,02,364 ಮೆ.ಟನ್
2012–13	54,297 ಮೆ.ಟನ್
2013–14	3,919 ಮೆ.ಟನ್

ಆ) ಕಾರವಾರ ಬಂದರಿನ ಮೂಲಕ ಹೊರ ದೇಶಗಳಿಗೆ ಗ್ರಾನೈಟ್ ದಿಮ್ಮೆಗಳನ್ನು ರಫ್ತು ಮಾಡಿದ ಬಗ್ಗೆ ಬಂದರು ಬಳಕೆದಾರರು ಇಲಾಖೆಗೆ ಸಂದಾಯ ಮಾಡಿದ ವಾರ್ಫೆಜ್ ಶುಲ್ಕಗಳ ವರ್ಷವಾರು ವಿವರ ಈ ಕೆಳಗಿನಂತಿದೆ:

2011–12	₹ 80,94,460.00
2012–13	₹ 21,71,880.00
2013–14	₹ 1,56,760.00

ಇ) ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ

ನೀರಾವರಿ ಯೋಜನೆಯ ಅಭಿವೃದ್ಧಿಗಾಗಿ ಬಿಡುಗಡೆಯಾದ ಅನುದಾನ

4109(4549); ಡಾ॥ ರಫೀಕ್ ಅಹ್ಮದ್, ಎಸ್.

ಅ) ತುಮಕೂರು ವಿಧಾನ ಸಭಾ ಕ್ಷೇತ್ರದ ಸಣ್ಣ ನೀರಾವರಿ ಯೋಜನೆಯ ಅಭಿವೃದ್ಧಿಗೆ 2011 ರಿಂದ 2013 ಏಪ್ರಿಲ್‌ವರೆಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಮೊತ್ತ ಎಷ್ಟು? (ವಿವರ ನೀಡುವುದು)

ಆ) ಈ ಅನುದಾನದಲ್ಲಿ ಕೈಗೊಂಡ ಪ್ರಮುಖ ಯೋಜನೆಗಳಾವುವು (ವಿವರಗಳನ್ನು ನೀಡುವುದು)

ಇ) ಯಾವ ಯೋಜನೆಗಳು ಬಾಕಿ ಉಳಿದಿವೆ.

ಈ) ಬಾಕಿ ಉಳಿದ ಯೋಜನೆಗಳನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು.

ಶ್ರೀ ಶಿವರಾಜ್ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) ತುಮಕೂರು ವಿಧಾನ ಸಭಾ ಕ್ಷೇತ್ರದ ಸಣ್ಣ ನೀರಾವರಿ ವಿಭಾಗದ ವ್ಯಾಪ್ತಿಯಲ್ಲಿ 2011–12 ರಿಂದ 2012–13 ರವರೆಗೆ ಬಿಡುಗಡೆಯಾದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.